


(37ನೇ ಪುಟದಿಂದ)

## ಶರವೇಗದ ಸರದಾರರು

### ಅಂಗೈಯಲ್ಲಿ ಜೀವ

ವೇಗದಲ್ಲಿರುವ ರೋಚಕತೆಯ ಸವಾಲು ಮಾತ್ರ ಜೀವಕ್ಕೆ ಕುತ್ತು ತರುವಂಥದ್ದು. ಎಷ್ಟೇ ಮುನ್ನೆಚ್ಚರಿಕೆ ಕ್ರಮ ಕೈಗೊಂಡರೂ ವಿಧಿ ಎಲ್ಲಿಂದಲೋ ಬಂದು ಅಪ್ಪಳಿಸಿಬಿಡುತ್ತದೆ. ಈ ಕಾರಣಕ್ಕಾಗಿಯೇ ರೇಸ್ ಭಾಷೆಯಲ್ಲಿ, ವೇಗ ಹಾಗೂ ಅಪಾಯವನ್ನು ಒಂದೇ ನಾಣ್ಯದ ಎರಡು ಮುಖಗಳು ಎನ್ನುತ್ತಾರೆ.

ಕೆಲ ತಿಂಗಳ ಹಿಂದೆ ಜಮ್ಮು ಮತ್ತು ಕಾಶ್ಮೀರ ಮೊಘಲ್ ಕಾರು ರ್‍ಯಾಲಿಯಲ್ಲಿ ಅನಂತನಾಗ್ ಜಿಲ್ಲೆಯ ಸಿಮ್ತಾನ್ ಬಳಿ ನಡೆದ ದುರ್ಘಟನೆಯಲ್ಲಿ ಬೆಂಗಳೂರು ಮೂಲದ ಚಾಲಕ ಜಿತೇಂದ್ರ ಶುಕ್ಲಾ ಹಾಗೂ ನೇವಿಗೇಟರ್ ಆಶಿಶ್ ಮಹಾಜನ್ ಮೃತಪಟ್ಟಿದ್ದರು.

ದಕ್ಷಿಣ ಡೇರ್ ರ್‍ಯಾಲಿಯಲ್ಲೂ ಅಪಘಾತ ಸಂಭವಿಸಿದವು. ಅದೃಷ್ಟವಶಾತ್ ದೊಡ್ಡ ಅಪಾಯ ಸಂಭವಿಸಲಿಲ್ಲ. ಬೆಂಗಳೂರಿನ ಚಾಲಕರಾದ ಧನಂಜಯ್ ಹಾಗೂ ಸಂಜಯ್ ಅಗರವಾಲ್ ಅವರ ಕಾರುಗಳೂ ಅಪಘಾತಕ್ಕೆ ಒಳಗಾದವು. ಉದಕಮಂಡಲ ಚಹಾ ಎಸ್ಟೇಟ್‌ನ ಕಡಿದಾದ ಇಳಿಜಾರಿನ ತಿರುವಿನಲ್ಲಿ ರಭಸದಿಂದ ನುಗ್ಗಿಬಂದ ಧನಂಜಯ್ ಚಾಲನೆ ಮಾಡುತ್ತಿದ್ದ ಬಿಳಿ ಜಿಪ್ಸಿ, ನಿಯಂತ್ರಣ ಕಳೆದುಕೊಂಡು ಗುಂಡಿಯೊಳಗೆ ಬಿತ್ತು.

ಮತ್ತೊಬ್ಬ ಚಾಲಕ ಸಂಜಯ್ ಕೊಂಚದರಲ್ಲಿ ಕಣಿವೆಯೊಳಗೆ ಬೀಳುವ ಅಪಾಯದಿಂದ ಪಾರಾದರು. ಮೂರನೇ ಸ್ಥಾನದಲ್ಲಿದ್ದ ಅವರ ಹಳದಿ ಜಿಪ್ಸಿ ತಾಂತ್ರಿಕ ಸಮಸ್ಯೆಯಿಂದಾಗಿ ನಿಯಂತ್ರಣ ಕಳೆದುಕೊಂಡಿತು. ಆದರೆ ಚಹಾ ಗಿಡಗಳಿಗೆ ಅಪ್ಪಳಿಸಿ ಅಲ್ಲೇ ನಿಂತಿತು.

ಆದರೆ ಸವಾಲು ಇಲ್ಲದ ಸಾಹಸಕ್ಕೇನು ಬೆಲೆ, ಅಲ್ಲವೇ? ಅದು ರೇಸಿಂಗ್‌ನ ವಿಶೇಷ! ಹಾಗಾಗಿಯೇ ಈ ಶರವೇಗದ ಸರದಾರರು ಎಂತಹ ಕಠಿಣ ಸವಾಲುಗಳನ್ನೂ ಎದುರಿಸಲು ಸಿದ್ಧರಾಗಿರುತ್ತಾರೆ.

